# ಸಶಕ್ತ ಸಮಾಜಕ್ಕೆ ಯೋಗ-ಧ್ಯಾನ ಮುಖ್ಯ

## ಕರ್ನಾಟಕ ವಿವಿ ರಾಣಿ ಚೆನ್ನಮ್ಮ ಮೈದಾನದಲ್ಲಿ ಯೋಗಾಥಾನ್: ಡಾ. ಶಾಲಿನಿ ರಜನೀಶ

• **ಕನ್ನಡಪ್ರಭ ವಾರ್ತೆ** ಧಾರವಾಡ

ಸಶಕ್ತ ರಾಷ್ಟ್ರ ಮತ್ತು ಯುವ ಸಮಾಜ ನಿರ್ಮಾಣಕ್ಕೆ ಯೋಗ ಮತ್ತು ಧ್ಯಾನ ಬಹು ಮುಖ್ಯ ಸಾಧನವಾಗಿವೆ ಎಂದು ರಾಜ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯ ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಗಿನ್ನಿಸ್ ದಾಖಲೆಗಾಗಿ ಭಾನುವಾರ ಆಯೋಜಿಸಿದ್ದ ಬೃಹತ್ ಯೋಗಾಥಾನ್ ಉದ್ದೇಶಿಸಿ ಮಾತನಾಡಿದರು.

ಮಾನಸಿಕ ಅಸ್ಥಿರತೆ, ಅನಾರೋಗ್ಯ ಮತ್ತು ಚಂಚಲತೆ ಆತ್ಮಹತ್ಯೆಗೆ ಕಾರಣಗಳಾಗಿವೆ. ದೇಶದ ಯುವ ಸಮೂಹದ ಆತ್ಮಹತ್ಯೆಗಳ ಪೈಕಿ ಒಟ್ಟು ಶೇ. 32 ರಷ್ಟು ಸಾವು ಮಾನಸಿಕ ಅನಾರೋಗ್ಯದಿಂದ ಆಗುತ್ತಿವೆ. ಯೋಗ ಮತ್ತು ಧ್ಯಾನ ಮಾನಸಿಕ ಸದೃಢತೆ ಹೆಚ್ಚಿಸುತ್ತದೆ. ಆರೋಗ್ಯಯುತ ದೈಹಿಕ ಬೆಳವಣಿಗೆ ಒದಗಿಸುತ್ತದೆ. ಯುವಕರು, ವಿದ್ಯಾರ್ಥಿಗಳು ದಿನನಿತ್ಯ ತಮ್ಮ ಜೀವನದ ಒಂದು ಭಾಗವಾಗಿ ಯೋಗ ಮತ್ತು ಧ್ಯಾನವನ್ನು ರೂಢಿಸಿಕೊಳ್ಳಬೇಕು. ಇದರಿಂದ ಸಶಕ್ತ ಭಾರತ ನಿರ್ಮಿಸಲು ಸಾಧ್ಯವಾಗುತ್ತದೆ ಎಂದರು.

ಈಗಾಗಲೇ ನಾವು ಸಾಕ್ಷರ ರಾಜ್ಯವಾಗಿದ್ದೇವೆ. ಈಗ ಸರ್ಕಾರವು ರಾಜ್ಯವನ್ನು ಯೋಗ ಸಾಕ್ಷರ ರಾಜ್ಯವಾಗಿಸುವ ಕನಸು ಹೊಂದಿದೆ. ಆದ್ದರಿಂದಾಗಿಯೇ ಇಂದಿನ ಯೋಗಾಥಾನ್ ಆಯೋಜಿಸಲಾಗಿದೆ ಎಂದರು.




ಕರ್ನಾಟಕ ವಿಶ್ವವಿದ್ಯಾಲಯ ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಗಿನ್ನಿಸ್ ದಾಖಲೆಗಾಗಿ ಭಾನುವಾರ ಆಯೋಜಿಸಿದ್ದ ಬೃಹತ್ ಯೋಗಾಥಾನ್

ಕಾರ್ಯಕ್ರಮ ಉದ್ಘಾಟಿಸಿದ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಯೋಗ ಜೀವನದಲ್ಲಿ ಅತಿ ಮುಖ್ಯ. ಯುವ ಸಮೂಹ ಮಾನಸಿಕವಾಗಿ ಗಟ್ಟಿಗೊಳ್ಳಲು ಧ್ಯಾನ ಮಾಡಬೇಕು. ವಿದ್ಯಾರ್ಥಿಗಳು ಯೋಗ ಮತ್ತು ಧ್ಯಾನವನ್ನು ಪ್ರತಿ ದಿನ ಮಾಡುವುದರಿಂದ ನೆನಪಿನ ಶಕ್ತಿ ಹೆಚ್ಚುತ್ತದೆ. ಉತ್ತಮ ಆರೋಗ್ಯ ಲಭಿಸುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕವಿವಿ ಕುಲಪತಿ ಡಾ. ಕೆ.ಬಿ. ಗುಡಸಿ ಮಾತನಾಡಿ, ಪ್ರಧಾನಮಂತ್ರಿಗಳ ಸಂದೇಶ ವಾಚಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸೋನಲ್ ವೃಷ್ಣಿ ಅತಿಥಿಗಳಾಗಿದ್ದರು. ಕವಿವಿ ಕುಲಸಚಿವ ಯಶಪಾಲ್ ಕ್ಷೀರಸಾಗರ ಸ್ವಾಗತಿಸಿದರು. ಸಮಾಜ ವಿಜ್ಞಾನ ನಿಕಾಯದ ಡೀನ್ ಡಾ. ಎಸ್.ಟಿ. ಬಾಗಲಕೋಟಿ ವಂದಿಸಿದರು. ಮಹಾದೇವ ಆರೇರ ಕಾರ್ಯಕ್ರಮ ನಿರೂಪಿಸಿದರು. ಯೋಗಾಥಾನ್‌ನಲ್ಲಿ ಕವಿವಿ ಅಧಿಕಾರಿಗಳು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಯೋಗಪಟುಗಳು, ಸಾರ್ವಜನಿಕರು ಭಾಗವಹಿಸಿ, ಯೋಗ ಪ್ರದರ್ಶನ ಮಾಡಿದರು.

ಕನ್ನಡಪ್ರಭ Mon, 16 January 2023
https://kpepaper.asianetnews.com/c/71430358



ಶಿರಸಿಯ ಮಾರಿಕಾಂಬಾ ಕಾಲೇಜ್ ಆವರಣದಲ್ಲಿ ಭಾನುವಾರ ಆಯೋಜಿಸಲಾಗಿದ್ದ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿನಂದನಾ ಸಮಾರಂಭದಲ್ಲಿ ಸ್ಪೀಕರ್ ಕಾಗೇರಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಈ ವೇಳೆ ವಿಪ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಸಿ.ಸಿ. ಪಾಟೀಲ್ ಮತ್ತಿತರರು ಇದ್ದರು.

**• ಕನ್ನಡಪ್ರಭ ವಾರ್ತೆ** ಶಿರಸಿ

ಶಿರಸಿಯಲ್ಲಿ 'ಪರಿಸರ ವಿಶ್ವವಿದ್ಯಾಲಯ', ಕರ್ನಾಟಕ ವಿವಿಯಲ್ಲಿ ನಾಡಿನ ದೀಮಂತ ರಾಜಕಾರಣಿ 'ರಾಮಕೃಷ್ಣ ಹೆಗಡೆ ಅಧ್ಯಯನ ಪೀಠ' ಸ್ಥಾಪಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿನಂದನಾ ಸಮಾರಂಭಕ್ಕೆ ಭಾನುವಾರ ಆಗಮಿಸಿದ್ದ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದರು.

ಶಿರಸಿಯಲ್ಲಿ ಅರಣ್ಯ ಕಾಲೇಜು ಹಾಗೂ ತೋಟಗಾರಿಕೆ ಕಾಲೇಜು ಇವೆ. ಇವೆರಡನ್ನೂ ಸೇರಿಸಿ ವಿ.ವಿ. ಸ್ಥಾಪಿಸುತ್ತೇವೆ. ಅರಣ್ಯ, ತೋಟಗಾರಿಕೆ, ಜೀವ ವೈವಿಧ್ಯತೆ, ವನ್ಯಜೀವಿ ರಕ್ಷಣೆಯನ್ನು ಗಮನದಲ್ಲಿ ಇಟ್ಟುಕೊಂಡು, ಸಾಮಾಜಿಕ ಅಭಿವೃದ್ಧಿ ಹಾಗೂ ಪರಿಸರ ಸಮತೋಲನ ಹಿನ್ನೆಲೆಯಲ್ಲಿ ವಿ.ವಿ. ಸ್ಥಾಪಿಸಲಾಗುವುದು ಎಂದರು.

ಈ ಪರಿಸರ ವಿವಿಯಲ್ಲಿ ಪರಿಸರದ ವಿಷಯಗಳಲ್ಲದೆ ಕಲೆ, ವಿಜ್ಞಾನ, ವಾಣಿಜ್ಯ ಹಾಗೂ ಇತರ ವಿಷಯಗಳ ಅಧ್ಯಯನಕ್ಕೂ ಅವಕಾಶ ಇದೆ. ಇದೊಂದು ಕಾಂಪೋಜಿಟ್ ಯುನಿವರ್ಸಿಟಿ ಆಗಿರಲಿದೆ. ಈ ಭಾಗಕ್ಕೆ ಸರ್ಕಾರದ ಕೊಡುಗೆ ಇದಾಗಿದೆ ಎಂದು ಬಣ್ಣಿಸಿದರು.

ಕರ್ನಾಟಕ ವಿವಿಯಲ್ಲಿ ರಾಮಕೃಷ್ಣ ಹೆಗಡೆ ಅಧ್ಯಯನ ಪೀಠ ಆದಷ್ಟು ಬೇಗ ರಚಿಸಲಾಗುವುದು. ಗ್ರಾಮೀಣ ಅಭಿವೃದ್ಧಿ ಹಾಗೂ ಅಧಿಕಾರ ವಿಕೇಂದ್ರೀಕರಣಕ್ಕೆ ಹೆಗಡೆ ಸಾಕಷ್ಟು ಒತ್ತು ನೀಡಿದ್ದಾರೆ. ರಾಜ್ಯಕ್ಕೆ ಯೋಜನಾ ಮಂಡಳಿಯನ್ನೂ ತಂದಿದ್ದಾರೆ. ಲೋಕಾಯುಕ್ತವನ್ನೂ ರಚಿಸಿದ್ದಾರೆ. ಇದರಿಂದ ಅಧ್ಯಯನ ಪೀಠ ರಚನೆಗೆ ಮುಂದಾಗಿದ್ದೇವೆ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು.

**ಒಕ್ಕಲೆಬ್ಬಿಸುವುದಿಲ್ಲ:** ಯಾವುದೇ ಕಾರಣಕ್ಕೂ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವುದಿಲ್ಲ. ಅರಣ್ಯವಾಸಿಗಳನ್ನು ರಕ್ಷಣೆ ಮಾಡುವ ಅವಶ್ಯಕತೆ ಇದೆ. ತಲೆತಲಾಂತರದಿಂದ ಅವರು ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಮನೆ ನಿರ್ಮಿಸಿ, ಸಾಗುವಳಿ ಮಾಡುತ್ತಿದ್ದಾರೆ. ಈ ವಿಚಾರ ಸುಪ್ರೀಂ ಕೋರ್ಟಿನಲ್ಲಿದೆ. ದೇಶದ ಎಲ್ಲ ರಾಜ್ಯಗಳಲ್ಲಿ ಈ ಸಮಸ್ಯೆ ಇದೆ. ಮೂರು ತಲೆಮಾರು ಬದಲು ಒಂದೇ ತಲಮಾರಿನ ದಾಖಲೆಗೆ ಪಡೆದುಕೊಂಡು ಅರಣ್ಯವಾಸಿ ಎಂದು ನಿರ್ಣಯ ಮಾಡಿ ಹಕ್ಕುಪತ್ರ ನೀಡಬೇಕೆಂದು ನಮ್ಮ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಿದ್ದೇವೆ ಎಂದರು.

ಕನ್ನಡನಾಡಿನಲ್ಲಿ ಅರಣ್ಯವಾಸಿಗಳು ಎಲ್ಲೆಲ್ಲಿ ಇದ್ದಾರೆ, ಅವರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವ ಕೆಲಸ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಭರವಸೆ ನೀಡಿ, ಸುಪ್ರೀಂ ಕೋರ್ಟ್ ನಿರ್ಣಯ ಆಗುವ ತನಕ ಯಾವುದೇ ತೊಂದರೆ ಮಾಡುವುದಿಲ್ಲ. ಯಾರೂ ಹೆದರುವ ಅವಶ್ಯಕತೆ ಇಲ್ಲ. ಬದುಕಿಗೆ ತೊಂದರೆ ಮಾಡುವುದಿಲ್ಲ ಎಂದು ಸಿಎಂ ಭರವಸೆ ನೀಡಿದರು.

**ಗೋವಾಕ್ಕೆ ಪ್ರತ್ಯುತ್ತರ:** ಕಳಸಾ ಬಂಡೂರಿ ಯೋಜನೆಯನ್ನು ನಾವು ಕಾನೂನು ಬದ್ಧವಾಗಿ ಮಾಡುತ್ತೇವೆ. ಈ ಬಗ್ಗೆ ಸುಪ್ರಿಂ ಕೋರ್ಟ್ ನಿರ್ದೇಶನದಿಂದ ಟ್ರಿಬ್ಯುನಲ್ ರಚನೆಯಾಗಿದೆ. ಟ್ರಿಬ್ಯುನಲ್‌ನಿಂದ ಆದೇಶವೂ ಆಗಿದೆ. ನೋಟಿಫಿಕೇಶನ್ ಸಹ ಆಗಿದೆ. ಅದರ ಅನ್ವಯ ವಿವರವಾದ ಯೋಜನಾ ವರದಿಗೆ ಒಪ್ಪಿಗೆ ನೀಡಲಾಗಿದೆ. ಎಲ್ಲವೂ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ನಡೆಯುತ್ತಿದೆ ಎನ್ನುವ ಮೂಲಕ ಗೋವಾಕ್ಕೆ ಅಪಸ್ವರಕ್ಕೆ ಪ್ರತ್ಯುತ್ತರ ನೀಡಿದರು.

ಸಚಿವ ಸಂಪುಟ ವಿಸ್ತರಣೆ ಕುರಿತು ಚರ್ಚೆಯಾಗಿದೆ. ಆದರೆ ಹೈಕಮಾಂಡಿನಿಂದ ಯಾವುದೇ ಸೂಚನೆ ಇಲ್ಲ. ಸಂಪುಟ ವಿಸ್ತರಣೆ ಹೈಕಮಾಂಡ್ ಸೂಚನೆಯನ್ನು ಅವಲಂಬಿಸಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ರಾಜ್ಯದಲ್ಲಿ ಕೆಲವು ಅಕಾಡೆಮಿಗಳ ಅವಧಿ ಮುಗಿದಿದೆ. ಕೆಲವು ಮುಗಿದಿಲ್ಲ. ಎಲ್ಲವನ್ನೂ ಪರಿಶೀಲಿಸಿ ಅಕಾಡೆಮಿಗಳಿಗೆ ಅಧ್ಯಕ್ಷರ ನೇಮಕ ಪ್ರಕ್ರಿಯೆ ನಡೆಯಲಿದೆ ಎಂದು ಹೇಳಿದರು.

ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಶಿವರಾಮ ಹೆಬ್ಬಾರ ಮತ್ತಿತರರು ಇದ್ದರು.

**ಕನ್ನಡನಾಡಿನಲ್ಲಿ ಅರಣ್ಯವಾಸಿಗಳು ಎಲ್ಲೆಲ್ಲಿ ಇದ್ದಾರೆ, ಅವರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸುವ ಕೆಲಸ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಭರವಸೆ ನೀಡಿ. ಸುಪ್ರೀಂ ಕೋರ್ಟ್ ನಿರ್ಣಯ ಆಗುವ ತನಕ ಯಾವುದೇ ತೊಂದರೆ ಮಾಡುವುದಿಲ್ಲ. ಯಾರೂ ಹೆದರುವ ಅವಶ್ಯಕತೆ ಇಲ್ಲ.**

**• ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ